ಈಗ ಅಬ್ಬಾನೇ ಕರೆಯುತ್ತಾರೆ ''ಶಾಹೆನಾ... ಮಗಳೇ ಶಾಹೆನಾ... ಎಲ್ಲಿದ್ದೀಯಾ... ನೋಡು ಮಾವ ಕೇಳ್ತಾ ಇದ್ದಾರೆ.''

ಶಾಹೆನಾ ಸೀರೆಯ ನೆರಿಗೆಗಳನ್ನು ಸರಿಪಡಿಸಿಕೊಂಡಳು. ಗುಲಾಬಿ ಹೂವಿನ ಬಳ್ಳಿಗಳೇ ತುಂಬಿರುವ ಸೀರೆಯ ಸೆರಗನ್ನು ತಲೆತುಂಬ ಹೊದ್ದುಕೊಳ್ಳುತ್ತ ಅಬ್ಬುವಿನ ಪಕ್ಕ ನಿಂತರೆ ಅಬ್ಬುವೂ ಆಶ್ಚರ್ಯದಿಂದ ಶಾಹೆನಾಳತ್ತ ನೋಡುತ್ತಾರೆ. ಮಾವನಂತೂ ಬಿಟ್ಟ ಕಣ್ಣಿನಿಂದ ನೋಡಿ, ನಗುತ್ತ ಹೇಳುತ್ತಾರೆ.

''ಶಾಹೆನಾ, ನಿಜಕ್ಕೂ ಪರಿಯಂತೆ ಬೆಳೆದುಬಿಟ್ಟಿದ್ದಾಳೆ!''

ಮತ್ತೊಮ್ಮೆ ಹೇಳುತ್ತಾರೆ ಮಾವ ಅಬ್ಬುವಿನ ಕಿವಿಯ ಬಳಿ ಮುಖ ತಂದು, ''ಮಗಳು ಮದ್ವೆಗೆ ಬೆಳೆದಿದ್ದಾಳೆ ಅಲ್ವಾ'' ಎಂದು.

ಅವರು ಹೊರಟು ಹೋದ ನಂತರವೂ ಅಬ್ಬು ಒಳಗೆ ಅಜ್ಜಿ – ಉಮ್ಮ ಊಟ ಮಾಡುವಲ್ಲಿಗೇ ಬಂದು ಹೋಗುತ್ತಾರೆ.

ನಮ್ಮ ಮಗಳು ನಿನ್ನೆ ಮೊನ್ನೆಯ ಮಗುವಾಗಿದ್ದವಳು ಒಂದೇ ದಿನದಲ್ಲಿ ಹೆಂಗಸಾಗಿಬಿಟ್ಟಂತಿದೆ.

ಅಜ್ಜಿ ಈಗ ತಗ್ಗಿನ ಸ್ವರದಲ್ಲಿ ಹೇಳುತ್ತಾರೆ, ''ನಮ್ಮ ಮನೆ–ಮಕ್ಕಳು ನಮ್ಮ ಕಣ್ಣಿಗೆ ಸಣ್ಣವರೇ ನೋಡು ಮಗನೇ. ಈಗ ಅವಳಿಗೆ ಹದಿನಾರು ಕಳೆಯಿತು. ಅವಳ ಮದ್ವೆ ಬಗ್ಗೆ ಈಗ್ಲಾದ್ರೂ ಯೋಚನೆ ಮಾಡ್ಬೇಕು ನೀನು.''

ಯಾಕೋ ಶಾಹೆನಾಳ ಉಮ್ಮನಿಗೆ ತುತ್ತು ಗಂಟಲಲ್ಲಿ ಇಳಿಯದಂತಾಗಿದೆ. ಅವರು ಊಟದ ಮಧ್ಯಕ್ಕೇ ಎದ್ದುಬಿಡುತ್ತಾರೆ.

★★★

ಅಲ್ಲಾಹುವಿನ ಕೃಪೆಯಿಂದ ಇದಾದ ಕೆಲ ದಿನಗಳಲ್ಲೇ ಶಾಹೆನಾಳಿಗೆ ಸಂಬಂಧವೊಂದು ಅರಸಿ ಬಂದಿತ್ತು. ಹುಡುಗ ದೊಡ್ಡ ತಲೆಮಾರಿನವ. ತಂದೆ ತಾಯಿಗೆ ಒಬ್ಬನೇ ಮಗ. ಕಾಲೇಜು ಕಲಿತುಕೊಂಡಿದ್ದ. ಕೂತುಣ್ಣಲು ಕಡಿಮೆಯಿರದಷ್ಟು ಶ್ರೀಮಂತಿಕೆಯ ಸಂಬಂಧ. ಹುಡುಗನದ್ದು ಶಿವಮೊಗ್ಗೆಯಲ್ಲಿ ಎರಡೆರಡು ದೊಡ್ಡ ಕಿರಾಣಿ ಅಂಗಡಿಗಳಿವೆ. ಒಂದು ರೈಸ್ ಮಿಲ್ಲಿದೆ. ನಾಲ್ಕಾರು ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಜನ ಒಳ್ಳೆಯವರು. ಮನೆಯಲ್ಲಿ ಇರುವುದು ಹುಡುಗ ಮತ್ತು ಆತನ ತಾಯಿ ಮಾತ್ರ.

ಒಂದೇ ನೋಟಕ್ಕೆ ನೋಡಲು ಬಂದವರು ಶಾಹೆನಾಳನ್ನು ಪಸಂದ್ ಮಾಡಿಕೊಂಡೇ ಹೋಗಿದ್ದರು. ಶಾಹೆನಾ ಆ ಮನೆಯಲ್ಲಿ ಆರಾಮವಾಗಿ ರಾಣಿಯ ಹಾಗಿರಬಹುದು ಎಂದು ಲೆಕ್ಕಾಚಾರ ಹಾಕಿದ್ದ ಶಾಹೆನಾಳ ಉಮ್ಮ ಮತ್ತು ಅಬ್ಬುವಿಗೆ ಅವರ ಒಪ್ಪಿಗೆಯಿಂದ ಬಹಳ ಖುಷಿಯಾಗಿತ್ತು.

ಈಗ ಆ ಮನೆಯಲ್ಲಿ ಸಂಭ್ರಮ–ಸಂತಸದ ವಾತಾವರಣ. ಶಾಹೆನಾ ಮನದಲ್ಲೇ ಏನೇನೋ ಕಲ್ಪಿಸಿಕೊಂಡು ಕೆಂಪೇರುತ್ತಾಳೆ. ಇನ್ನೇನು ಮದುವೆಗೆ ಎಲ್ಲ ಸಿದ್ಧತೆಗಳೂ ಭರಭರನೆಂದು ನಡೆದು ಹೋಗುತ್ತಲಿವೆ. ಸಜೀದ ಕೂಡ ದುಬೈಯಿಂದ ಇನ್ನೇನು ಬರುವವನಿದ್ದಾನೆ. ಅರ್ಧದಷ್ಟು ಸಿದ್ಧತೆಗಳು ಮುಗಿದಿವೆಯಾದರೂ ಶಾಹೆನಾಳ ಅಬ್ಬುವಿಗೆ ನಿಂತರೆ ನಿಂತ ಹಾಗಿಲ್ಲ, ಕೂತರೆ ಕೂತಂತಿಲ್ಲ. ಅದಿನ್ನೂ ಆಗಿಲ್ಲ, ಇದನ್ಯಾವಾಗ ಮಾಡೋದು ಎಂದು ಒಂದೇ ಸಮನೆ ಓಡಿಯಾಡುತ್ತಾರೆ. ಅಜ್ಜಿ ಶಾಹೆನಾಳಿಗೆ ಎಣ್ಣೆ ಹಾಕಿ ಬಾಚುತ್ತ ಗಂಡನ ಮನೆಯಲ್ಲಿ ಅವಳು ಹೇಗಿರಬೇಕು ಏನೇನು ಮಾಡಬೇಕು ಏನು ಮಾಡಬಾರದು ಎಂಬುದರ ಬಗ್ಗೆ ನಿನ್ನೆಯಷ್ಟೇ ಹೇಳಿದ್ದನ್ನು ಮತ್ತೆ ಹೇಳುತ್ತಾರೆ. ಆಗೆಲ್ಲ ಗಂಡನ ಮನೆಗೆ ಹೊರಟು ಹೋಗಲಿರುವ ಮಗಳನ್ನು ನೋಡುತ್ತಿದ್ದಂತೇ ಶಾಹೆನಾಳ ಉಮ್ಮನ ಕಣ್ಣುಗಳು ಒದ್ದೆಯಾಗುತ್ತಿದ್ದವು.

★★★